ಕರ್ನಾಟಕ ಸರ್ಕಾರ
ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು–584 102
(ಸ್ವಾಯತ್ತ ವೈದ್ಯಕೀಯ ಸಂಸ್ಥೆ) ಫೋನ/ ಫ್ಯಾಕ್ಸ್ ಸಂಖ್ಯೆ: 08532-235488

---

ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಮಾನ್ಯ ಶ್ರೀ. ಡಾ|| ವ್ಹಿ.ಎಸ್.ಆಚಾರ್ಯ, ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 21.09.2007, ರಂದು ಸಂಜೆ: 3.00 ಘಂಟೆಗೆ, ಕೊಠಡಿ ಸಂಖ್ಯೆ: 38, ನೆಲಮಹಡಿ, ವಿಕಾಸ ಸೌಧ, ಬೆಂಗಳೂರು, ಇಲ್ಲಿ 5ನೇ ಆಡಳಿತ ಮಂಡಳಿ ಸಮಿತಿ ಸಭೆಯನ್ನು ನೆಡಸಲಾಯಿತು.

ಸಭೆಗೆ ಹಾಜರಿದ್ದವರು:

| | |
|---|---|
| 1. ಡಾ|| ವ್ಹಿ.ಎಸ್.ಆಚಾರ್ಯ,<br>ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು,<br>ಕರ್ನಾಟಕ ಸರ್ಕಾರ, ಬೆಂಗಳೂರು. | ಅಧ್ಯಕ್ಷರು |
| 2. ಶ್ರೀ.ಹೆಚ್.ಗಣೇಶ್ ಮೂರ್ತಿ,<br>ಉಪ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ಬೆಂಗಳೂರು. | ಸದಸ್ಯರು |
| 3. ಡಾ|| ರಮಾನಂದ ಶೆಟ್ಟಿ,<br>ನಿರ್ದೇಶಕರು, ವೈದ್ಯಕೀಯ ಶಿಕ್ಷಣ,<br>ಆನಂದ ರಾವ್ ವೃತ್ತ, ಬೆಂಗಳೂರು. | ಸದಸ್ಯರು |
| 4. ಶ್ರೀ.ಶಂಕರಪ್ಪ<br>ಮುಖ್ಯ ಆಡಳಿತಾಧಿಕಾರಿಗಳು,<br>ರಿಮ್ಸ್, ರಾಯಚೂರು. | ಸದಸ್ಯರು |
| 5. ಶ್ರೀ.ದುರ್ಗಾರಾವ್,<br>ಗುತ್ತೆದಾರರು, ಹೈಗ್ರೀವಾ ಇಂಜಿನಿಯರಿಂಗ್ ಕಂಪನಿ,<br>ರಾಯಚೂರು. | ವಿಶೇಷ ಆಹ್ವಾನಿತರು |
| 6. ಡಾ|| ಎಂ.ಆರ್.ಚಂದ್ರಶೇಖರ್,<br>ಡೀನ್–ಕಂ–ಡೈರೆಕ್ಟರ್,<br>ರಿಮ್ಸ್ ರಾಯಚೂರು. | ಸದಸ್ಯ ಕಾರ್ಯದರ್ಶಿ |

ಕರ್ನಾಟಕ ಸರ್ಕಾರ
ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು–584 102
(ಸ್ವಾಯತ್ತ ವೈದ್ಯಕೀಯ ಸಂಸ್ಥೆ) ಫೋನ/ ಫ್ಯಾಕ್ಸ್ ಸಂಖ್ಯೆ: 08532-235488

ಸಭಾ ನಡುವಳಿಗಳು:

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು ಅಧ್ಯಕ್ಷರಾದ ಸನ್ಮಾನ್ಯ ಡಾ॥ ವಿ.ಎಸ್.ಆಚಾರ್ಯ ರವರು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರನ್ನು ಹಾರ್ದಿಕವಾಗಿ ಸ್ವಾಗತಿಸಿ ಸಭೆಯನ್ನು ಪ್ರಾರಂಬಿಸಿದರು.

ಸಭೆಯಲ್ಲಿ ಅಧ್ಯಕ್ಷರ ಸಮಕ್ಷಮದಲ್ಲಿ ತೆಗೆದುಕೊಂಡ ನಿರ್ಣಯಗಳು ಈ ಕೆಳಗಿನಂತಿವೆ.

1. ರಿಮ್ಸ್ ಸಂಸ್ಥೆಯ, 2 ನೇ ಹಂತದ ಕಟ್ಟಡ ಕಾಮಗಾರಿಗಳನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಿ ಭಾರತೀಯ ವೈದ್ಯಕೀಯ ಮಂಡಳಿಯ ನಿಯಮಾನುಸಾರ ಅವಶ್ಯವಿರುವ ಕಾಮಗಾರಿಗಳನ್ನು ಎಂ.ಸಿ. ಐ ಪರಿವೀಕ್ಷಣೆಗೆ ಮೊದಲೇ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚನೆ ನೀಡಿದರು.
2. ಎಂ.ಸಿ.ಐ. ನಿಯಮಾನುಸಾರ ಅವಶ್ಯವಿರುವ ಬೋಧಕ ಸಿಬ್ಬಂದಿಯ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ತ್ವರಿತವಾಗಿ ನೇಮಕಾತಿ ಮಾಡಿಕೊಂಡು ಎಂ.ಸಿ.ಐ ಪರಿವೀಕ್ಷಣೆಗೆ ಮೊದಲೇ ಎಲ್ಲ ಹುದ್ದೆಗಳನ್ನು ರೋಸ್ಟರ್ ಪದ್ಧತಿಯನ್ನು ಕಡ್ಡಾಯವಾಗಿ ಪಾಲಿಸಿ ಭರ್ತಿ ಮಾಡಲು ಸೂಚಿಸಿದರು. 100 ಎಂ.ಬಿ.ಬಿಎಸ್ ವಿಧ್ಯಾರ್ಥಿಗಳ ಪ್ರವೇಶಕ್ಕೆ ಬೇಕಾಗುವ ಬೋಧಕ ಸಿಬ್ಬಂದಿಯನ್ನು ಮೊದಲನೇ ನವೀಕರಣಕ್ಕೆ ಭಾರತೀಯ ವೈದ್ಯಕೀಯ ಮಂಡಳಿ ಬೇಟಿ ನೀಡುವ ಮೊದಲೇ ಹುದ್ದೆಯ ಭರ್ತಿ ಮಾಡುವ ಬಗ್ಗೆ ಅತೀ ಶೀಘ್ರವಾಗಿ ಕ್ರಮಕೈಗೊಳ್ಳಲು ಸೂಚಿಸಿದರು.
3. ಈಗಾಗಲೇ ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ಪಟ್ಟಿಯನ್ನು ಅನುಮೋದಿಸಿದೆ.
4. ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವೈದ್ಯಕೀಯ ವಿಧ್ಯಾರ್ಥಿಗಳ ತರಬೇತಿಯನ್ನು ಸರಾಗವಾಗಿ ನಿರ್ಧಿಷ್ಟ ಅವದಿಯಲ್ಲಿ ಪೂರ್ಣಗೊಳಿಸಲು ಹಾಗೂ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ರಾಜೀವ ಗಾಂದಿ ಆರೋಗ್ಯ ವಿಶ್ವವಿದ್ಯಾಲಯದ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಬೇಕಾಗುವ ಎಲ್ಲ ನಿಯಮ ಮತ್ತು ವಿಧಾನಗಳನ್ನು ಅಳವಡಿಸುವಂತೆ ನಿರ್ದೇಶಕರಿಗೆ ಸೂಚಿಸಿದರು.

ಕರ್ನಾಟಕ ಸರ್ಕಾರ
ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು–584 102
(ಸ್ವಾಯತ್ತ ವೈದ್ಯಕೀಯ ಸಂಸ್ಥೆ) ಫೋನ/ ಫ್ಯಾಕ್ಸ್ ಸಂಖ್ಯೆ: 08532-235488

5. ಸ್ವಚ್ಛತೆ, ಭದ್ರತೆ ಹಾಗೂ ಇತರೇ ಸೇವೆಗಳಿಗೆ ಕರೆದಿರುವ ಟೆಂಡರ್ ಪ್ರಕಟಣೆಯನ್ನು ಅನುಮೋದಿಸಿ ಒಪ್ಪಿಗೆಯನ್ನು ಸೂಚಿಸಿದರು.

6. ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆಗೆ, ಭಾರತೀಯ ವೈದ್ಯಕೀಯ ಮಂಡಳಿಯ ಮೊದಲನೇ ನವೀಕರಣಕ್ಕೆ ಬೇಟಿ ನೀಡುವ ಮೊದಲೇ ನಿಯಮಾನುಸಾರ ಅಗತ್ಯವಿರುವ ಉಪಕರಣ ಮತ್ತು ಸಲಕರಣೆ ಹಾಗೂ ಪಿಠೋಪಕರಣಗಳ ಖರೀದಿಯನ್ನು ಟೆಂಡರ ಮೂಲಕ ಕರೆದು ಕೆ.ಟಿ.ಪಿ.ಪಿ ಆ್ಯಕ್ಟ್‌ನ್ನು ಖಡ್ಡಾಯವಾಗಿ ಪಾಲಿಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ಸೂಚಿಸಿದರು.

ಡಾ|| ವಿ.ಎಸ್.ಆಚಾರ್ಯ
ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ
ಹಾಗೂ
ಅಧ್ಯಕ್ಷರು
ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು.